**ಭಾರತ ಸರ್ಕಾರ**

**ವಾರ್ತಾ ಮತ್ತು ಪ್ರಸಾರ ಸಚಿವಾಲಯ**

'ಎ' ವಿಂಗ್, ಶಾಸ್ತ್ರಿ ಭವನ ನವದೆಹಲಿ - 110 001

ಡಿಸೆಂಬರ್ 4, 2020

ಇವರಿಗೆ,

ಎಲ್ಲಾ ಖಾಸಗಿ ಉಪಗ್ರಹ ಟಿವಿ ಚಾನೆಲ್‌ಗಳು

**ವಿಷಯ: ಆನ್‌ಲೈನ್ ಗೇಮಿಂಗ್, ಫ್ಯಾಂಟಸಿ ಸ್ಪೋರ್ಟ್ಸ್ ಇತ್ಯಾದಿಗಳ ಜಾಹೀರಾತುಗಳಿಗೆ ಮಾರ್ಗಸೂಚಿಗಳು**

1. ಆನ್‌ಲೈನ್ ಗೇಮಿಂಗ್, ಫ್ಯಾಂಟಸಿ ಸ್ಪೋರ್ಟ್ಸ್ ಇತ್ಯಾದಿಗಳ ಬಗ್ಗೆ ಹೆಚ್ಚಿನ ಸಂಖ್ಯೆಯ ಜಾಹೀರಾತುಗಳು ಟಿವಿ ಚಾನಲ್ ಗಳಲ್ಲಿ ಪ್ರಕಟವಾಗುತ್ತಿರುವುದು ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಗಮನಕ್ಕೆ ಬಂದಿದೆ. ಅಂತಹ ಜಾಹೀರಾತುಗಳು ಗ್ರಾಹಕರನ್ನು ತಪ್ಪುದಾರಿಗೆಳೆಯುವಂತಿವೆ. ಅವರಿಗೆ ಹಣಕಾಸು ಮತ್ತು ಇತರ ಅಪಾಯಗಳ ಬಗ್ಗೆ ಸರಿಯಾಗಿ ತಿಳಿಸುವುದಿಲ್ಲ. ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳು (ನಿಯಂತ್ರಣ) ಕಾಯ್ದೆ, 1995 ಮತ್ತು ಗ್ರಾಹಕ ಸಂರಕ್ಷಣಾ ಕಾಯ್ದೆ, 2019 ರ ಅಡಿಯಲ್ಲಿ ನೀಡಲಾಗಿರುವ ಜಾಹೀರಾತು ಸಂಹಿತೆಗೆ ಕಟ್ಟುನಿಟ್ಟಾಗಿ ಅನುಗುಣವಾಗಿಲ್ಲ ಎಂದು ಕಳವಳ ವ್ಯಕ್ತವಾಗಿತ್ತು. ಅದರಂತೆ, ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಗ್ರಾಹಕ ವ್ಯವಹಾರಗಳ ಸಚಿವಾಲಯ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಜೊತೆಗೆ ಪಾಲುದಾರರ ಸಮಾಲೋಚನಾ ಸಭೆಯನ್ನು 18.11 2020ರಂದು ನಡೆಸಿತು. ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ಸ್ ಕೌನ್ಸಿಲ್ ಆಫ್ ಇಂಡಿಯಾ (ಎ ಎಸ್ ಸಿ ಐ), ನ್ಯೂಸ್ ಬ್ರಾಡ್ಕ್ಯಾಸ್ಟರ್ಸ್ ಅಸೋಸಿಯೇಷನ್ (ಎನ್ ಬಿ ಎ), ಇಂಡಿಯನ್ ಬ್ರಾಡ್ಕ್ಯಾಸ್ಟಿಂಗ್ ಫೌಂಡೇಶನ್ (ಐಬಿಎಫ್), ಆಲ್ ಇಂಡಿಯಾ ಗೇಮಿಂಗ್ ಫೆಡರೇಶನ್

(ಎಐಜಿಎಫ್), ಫೆಡರೇಶನ್ ಆಫ್ ಇಂಡಿಯನ್ ಫ್ಯಾಂಟಸಿ ಸ್ಪೋರ್ಟ್ಸ್ (ಎಫ್ಐಎಫ್ಎಸ್) ಮತ್ತು ಆನ್‌ಲೈನ್ ರಮ್ಮಿ ಫೆಡರೇಶನ್ (ಒ ಆರ್ ಎಫ್) ಈ ಸಭೆಯಲ್ಲಿ ಭಾಗವಹಿಸಿದ್ದವು.

2. ಸಭೆಯಲ್ಲಿ ನಡೆದ ಚರ್ಚೆ ಮತ್ತು ಸಮಾಲೋಚನೆಯ ನಂತರ ಜಾಹೀರಾತುಗಳು ಪಾರದರ್ಶಕವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಗ್ರಾಹಕರನ್ನು ರಕ್ಷಿಸಲು ಜಾಹೀರಾತುದಾರರು ಮತ್ತು ಪ್ರಸಾರಕರ ಅನುಕೂಲಕ್ಕಾಗಿ ಎ ಎಸ್ ಸಿ ಐ ಸೂಕ್ತ ಮಾರ್ಗಸೂಚಿಯನ್ನು ನೀಡಬೇಕು ಎಂದು ತೀರ್ಮಾನಿಸಲಾಯಿತು. ಅದರಂತೆ 24.11.2020 ರ ಪತ್ರಿಕಾ ಪ್ರಕಟಣೆಯ ಮೂಲಕ ಎ ಎಸ್ ಸಿ ಐ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿತು. ಅದರ ನಕಲನ್ನು ಲಗತ್ತಿಸಲಾಗಿದೆ. ಈ ಮಾರ್ಗಸೂಚಿಗಳು 2020ರ ಡಿಸೆಂಬರ್ 15 ರಿಂದ ಜಾರಿಗೆ ಬರಲಿವೆ ಎಂದು ಎ ಎಸ್ ಸಿ ಐ ಪ್ರಸ್ತಾಪಿಸಿದೆ.

3. ಈ ಹಿನ್ನೆಲೆಯಲ್ಲಿ, ಎ ಎಸ್ ಸಿ ಐ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಬೇಕು ಮತ್ತು ಚಾನಲ್ ಗಳಲ್ಲಿ ಪ್ರಸಾರವಾಗುವ ಜಾಹೀರಾತುಗಳು ಎ ಎಸ್ ಸಿ ಐ ಮಾರ್ಗಸೂಚಿಗಳಿಗೆ ಬದ್ಧವಾಗಿರಬೇಕು ಎಂದು ಎಲ್ಲಾ ಪ್ರಸಾರಕರಿಗೆ ಸೂಚಿಸಲಾಗಿದೆ. ಕಾನೂನುಬಾಹಿರವಾದ ಯಾವುದೇ ಚಟುವಟಿಕೆಯನ್ನು ಜಾಹೀರಾತುಗಳು ಉತ್ತೇಜಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆಯೂ ಪ್ರಸಾರಕರಿಗೆ ಸೂಚಿಸಲಾಗಿದೆ.

ಈ ಪ್ರಕಟಣೆಯನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ನೀಡಲಾಗಿದೆ.

**ಜಿ.ಸಿ. ಅರೋನ್**

**ನಿರ್ದೇಶಕರು (ಬಿ.ಸಿ)**

ದೂರವಾಣಿ. 23386394

ಪ್ರತಿಗಳು:

1. ಶ್ರೀಮತಿ ಮನೀಶಾ ಕಪೂರ್, ಪ್ರಧಾನ ಕಾರ್ಯದರ್ಶಿ, ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ಸ್ ಕೌನ್ಸಿಲ್ ಆಫ್ ಇಂಡಿಯಾ (ಎ ಎಸ್ ಸಿ ಐ) 717 / ಬಿ, ಔರಸ್ ಚೇಂಬರ್, ಎಸ್.ಎಸ್. ಅಮೃತ್ವಾರ್ ಮಾರ್ಗ, ವರ್ಲಿ, ಮುಂಬೈ 400018. (contact@ascionline.org, manisha@acionline.org)
2. . ಅನ್ನಿ ಜೋಸೆಫ್, ಪ್ರಧಾನ ಕಾರ್ಯದರ್ಶಿ, ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಸೋಸಿಯೇಶನ್ (ಎನ್‌ಬಿಎ), ಮಾಂಟೀ ಹೌಸ್, ಸಿ -56 / 5, 3 ಟಿ 0 ಮಹಡಿ, ಸೆಕ್ಟರ್ -62, ನೋಯ್ಡಾ, ಉತ್ತರ ಪ್ರದೇಶ (nba@nbanewdelhi.com)
3. ಶ್ರೀ ರಾಧಾಕೃಷ್ಣನ್, ಕಾರ್ಯದರ್ಶಿ, ಇಂಡಿಯನ್ ಬ್ರಾಡ್ಕಾಸ್ಟಿಂಗ್ ಫೌಂಡೇಶನ್ (ಐಬಿಎಫ್), ಬಿ-304, ಅನ್ಸಾಲ್ ಪ್ಲಾಜಾ, ಮೂರನೇ ಮಹಡಿ, ಖೇಲ್ ಗಾಂವ್ ಮಾರ್ಗ್ ನವದೆಹಲಿ- 110049 (ibf@ibfindia.com)
4. ಆಲ್ ಇಂಡಿಯಾ ಗೇಮಿಂಗ್ ಫೆಡರೇಶನ್ (ಎಐಜಿಎಫ್), 928, 9ನೇ ಮಹಡಿ, ಯೂನಿಟ್ ನಂ. 9, ಕಾರ್ಪೋರೇಟ್ ಪಾರ್ಕ್-2 ಸ್ವಸ್ತಿಕ್ ಚೇಂಬರ್ ಹತ್ತಿರ,ವಿ ಎನ್ ಪೂರವ್ ಮಾರ್ಗ, ಮುಂಬೈ-400071 (relations@aigf.in)
5. ಫೆಡರೇಶನ್ ಆಫ್ ಇಂಡಿಯನ್ ಫ್ಯಾಂಟಸಿ ಸ್ಪೋರ್ಟ್ಸ್ (ಎಫ್ಐಎಫ್ಎಸ್), 1901, ಎ- ವಿಂಗ್, ನಮನ್ ಮಿಡ್ ಟೌನ್, ಸೇನಾಪತಿ ಬಾಪಟ್ ಮಾರ್ಗ, ಎಲ್ಫಿನ್ಸ್ಟೋನ್- ಪಶ್ಚಿಮ ಮುಂಬೈ, ಮುಂಬೈ-400013 (anwar@fifs.in)
6. ಆನ್‌ಲೈನ್ ರಮ್ಮಿ ಫೆಡರೇಶನ್ (ಒ ಆರ್ ಎಫ್), 011/ಎ, ಕೇರಳ ಟೌನ್, ಬಿ-ಜೆ, ಪಟೇಲ್ ರಸ್ತೆ, ಮಲಾಡ್ ಪಶ್ಚಿಮ, ಮುಂಬೈ-400064 (contact@torg.in)

## 24.11.2020 ರಂದು ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ಸ್ ಕೌನ್ಸಿಲ್ ಆಫ್ ಇಂಡಿಯಾ (ಎ ಎಸ್ ಸಿ ಐ) ಆನ್‌ಲೈನ್ ಗೇಮಿಂಗ್ ಕುರಿತು ಹೊಡಿಸಿರುವ ಮಾರ್ಗಸೂಚಿಗಳು (2020 ಡಿಸೆಂಬರ್ 15ರಿಂದ ಅನ್ವಯ)

1. ಯಾವುದೇ ಗೇಮಿಂಗ್ ಜಾಹೀರಾತಿನಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿ ಅಥವಾ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಹಾಗೆ ಕಾಣುವ ವ್ಯಕ್ತಿ, ನಿಜವಾದ ಹಣದ ಗೆಲುವಿನ ಆನ್ ಲೈನ್ ಗೇಮಿಂಗ್ ಆಟದಲ್ಲಿ ನಿರತರಾಗಿರುವ ಅಥವಾ ಅಂತಹ ವ್ಯಕ್ತಿಗಳು ಈ ಆಟಗಳನ್ನು ಆಡಬಹುದು ಎಂದು ಸೂಚಿಸುವ ಜಾಹೀರಾತನ್ನು ಪ್ರಸಾರ ಮಾಡುವಂತಿಲ್ಲ.

2. ಅಂತಹ ಪ್ರತಿಯೊಂದು ಗೇಮಿಂಗ್ ಜಾಹೀರಾತು ಈ ಕೆಳಗಿನ ಡಿಸ್ಕ್ಲೈಮರ್ (ನಿರಾಕರಣೆ) ಹೊಂದಿರಬೇಕು:

ಎ) ಮುದ್ರಣ / ಸ್ಥಿರ: ಈ ಆಟವು ಹಣಕಾಸಿನ ಅಪಾಯವನ್ನು ಒಳಗೊಂಡಿರುತ್ತದೆ ಮತ್ತು ವ್ಯಸನಕಾರಿಯಾಗಬಹುದು. ದಯವಿಟ್ಟು ಜವಾಬ್ದಾರಿಯುತವಾಗಿ ಮತ್ತು ನಿಮ್ಮದೇ ಸ್ವಂತ ಅಪಾಯದಲ್ಲಿ ಆಟವಾಡಿ.

I. ಅಂತಹ ನಿರಾಕರಣೆಯು ಜಾಹೀರಾತಿನಲ್ಲಿ ಶೇ.20ರಷ್ಟು ಜಾಗಕ್ಕಿಂತಕ್ಕಿಂತ ಕಡಿಮೆಯಿಲ್ಲದಂತೆ ಇರಬೇಕು.

II. ಇದು ಎಎಸ್ಸಿಐನ ಕೋಡ್ ನಲ್ಲಿ ತಿಳಿಸಲಾದ 4 (i) ii) (iv) ಮತ್ತು (vii) ನಿರಾಕರಣೆ ಮಾರ್ಗಸೂಚಿಗಳನ್ನು ನಿರ್ದಿಷ್ಟವಾಗಿ ಪೂರೈಸಬೇಕು.

ಬಿ) ಆಡಿಯೋ / ವಿಡಿಯೋ: " ಈ ಆಟವು ಹಣಕಾಸಿನ ಅಪಾಯವನ್ನು ಒಳಗೊಂಡಿರುತ್ತದೆ ಮತ್ತು ವ್ಯಸನಕಾರಿಯಾಗಬಹುದು. ದಯವಿಟ್ಟು ಜವಾಬ್ದಾರಿಯುತವಾಗಿ ಮತ್ತು ನಿಮ್ಮದೇ ಸ್ವಂತ ಅಪಾಯದಲ್ಲಿ ಆಟವಾಡಿ."

I. ಅಂತಹ ನಿರಾಕರಣೆಯು ಜಾಹೀರಾತಿನ ಕೊನೆಯಲ್ಲಿ ಸಾಮಾನ್ಯವಾಗಿ ಮಾತನಾಡುವ ವೇಗದಲ್ಲಿಯೇ ಇರಬೇಕು

II. ಇದು ಜಾಹೀರಾತು ಇರುವ ಭಾಷೆಯಲ್ಲಿಯೇ ಇರಬೇಕು

III. ಆಡಿಯೊ-ವಿಡಿಯೋ ಮಾಧ್ಯಮಗಳಲ್ಲಿ ನಿರಾಕರಣೆಯು, ಆಡಿಯೋ ಮತ್ತು ದೃಶ್ಯ ರೂಪಗಳಲ್ಲಿರಬೇಕು

3. ಜಾಹೀರಾತುಗಳು 'ನೈಜ ಹಣದ ಗೆಲುವಿನ' ಆನ್‌ಲೈನ್ ಗೇಮಿಂಗ್ ಅನ್ನು ಆದಾಯದ ಅವಕಾಶವಾಗಿ ಅಥವಾ ಪರ್ಯಾಯ ಉದ್ಯೋಗದ ಆಯ್ಕೆಯಾಗಿ ಪ್ರಸ್ತುತಪಡಿಸಬಾರದು.

4. ಗೇಮಿಂಗ್ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿಯು ಇತರರಿಗಿಂತ ಹೆಚ್ಚು ಯಶಸ್ವಿಯಾಗುತ್ತಾನೆ ಎಂದು ಜಾಹೀರಾತು ಸೂಚಿಸುವಂತಿರಬಾರದು.